ಮಹಾಪೂರವೇ ಎದುರಾಗುತ್ತದೆ. ಎಲ್ಲಾ ವರ್ಗಗಳ, ಎಲ್ಲಾ ರೀತಿಯ ಕಸುಬುಗಳ ಜನ. ಗಜಿಬಿಜಿ. ಭಾಷೆಗಳ ಮೇಲೋಗರ.

ಇವೆಲ್ಲ ನನಗೆ ಹೆಚ್ಚಾಗಿ ಕಂಡುಬರುತ್ತಿದ್ದುದು ಆಫೀಸಿಗೆ ಸಬರ್ಬನ್ ಟ್ರೇನಿನಲ್ಲಿ ಹೋಗುವಾಗ. ಮತ್ತೆ ಅಲ್ಲಿ ಫೋರ್ಟ್ ಪ್ರದೇಶದಲ್ಲಿ ಸುತ್ತಾಡುವಾಗ. ಎಂದೋ ವಿಟಿ ಸ್ಟೇಶನ್ನಿನೆದುರು ಗಲ್ಲಿಯೊಂದರ ಪಟ್ಟಿಗೆಯಂಗಡಿಯಲ್ಲಿ ಕಣ್ಣಿಗೆ ಬಿದ್ದ ಸಲಿಂಗಕಾಮಿಗಳ ಪತ್ರಿಕೆ 'ಬಾಂಬೆ ದೋಸ್ತ್' ಇರಬಹುದು. ಗೇಟ್‌ವೇ ಪಕ್ಕ ಸಮುದ್ರದಲ್ಲಿ ಜಿಗಿದು ತಳದಿಂದ ಖಾಲಿ ಬಿಯರ್ ಬಾಟಲುಗಳನ್ನೆತ್ತಿ ತಂದು ರೂಪಾಯಿಗೊಂದರಂತೆ ಮಾರಿ ಹೊಟ್ಟೆತುಂಬಿಸಿಕೊಳ್ಳುವ 10 ವರ್ಷದ ಹುಡುಗನಿರಬಹುದು. ಕಾಲಾ ಘೋಡಾದ ಆರ್ಟ್ ಪ್ಲಾಝಾದ ಪೇವ್ಮೆಂಟ್ ಮೇಲೆ ಅಗ್ಗದ ಬೆಲೆಗೆ ಸ್ಕೆಚ್‌ಗಳನ್ನು ಮಾರಾಟ ಮಾಡುತ್ತಿದ್ದ ಕಲಾಸಂತ ಕಮಲಾಕ್ಷ ಶೆಣೈ ಅವರೊಡನೆ ಭೇಟಿ ಇರಬಹುದು. ಅಥವಾ ಮುಂಬೈಯಲ್ಲಾದ ಭಯಾನಕ ಬಾಂಬ್ ಸ್ಫೋಟದ ಮುಖಾಮುಖಿ ಇರಬಹುದು. ಇನ್ನು ಆಫೀಸಿಗೆ ಹೋದರೆ ಒಂದು ವ್ಯಾಪಾರೀ ಜಗತ್ತಿನ ಅನಾವರಣ. ಅಡ್ವಟೈಜಿಂಗ್ ಕ್ಷೇತ್ರದಲ್ಲಿ ಕಾಲಿಟ್ಟ ಕೂಡಲೇ ಸೃಜನಶೀಲತೆ ಮೂಲಕ ಎಲ್ಲವನ್ನೂ ಮಾರಾಟ ಮಾಡುವ ಚಾಲೆಂಜ್.

ಈ ಕೊಲಾಜ್ ನನ್ನ ಮನದಾಳದಲ್ಲಿ ಮುಂಬೈಗೆ ಜೀವ ತುಂಬುತ್ತಲೇ ಇತ್ತು. ನನ್ನ ಕತೆಗಳಲ್ಲೂ ಹೆಚ್ಚಾಗಿ ಮುಂಬೈಸ್ಪಿರಿಟ್ ಮೂಡುತ್ತಾ ಹೋಯಿತು. ಜೊತೆಗೆ ತುಂಬ ಊರೂರು ಸುತ್ತುವ ಹುಚ್ಚಿದ್ದ ನಾನು ಹೋದಕಡೆ ನನ್ನ ಮೇಲೆ ಪ್ರಭಾವ ಬೀರಿದ ಘಟನೆಗಳು, ವ್ಯಕ್ತಿಗಳು, ಸಂಪ್ರದಾಯಗಳು, ನಂಬಿಕೆಗಳು ನನ್ನ ಕತೆಗಳಲ್ಲಿ ಬೇರೆ ಬೇರೆ ರೀತಿ ವ್ಯಕ್ತವಾಗತೊಡಗಿದುವು.

ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಬಹುದಾದರೆ ಫ್ಯಾಂಟಸಿ ಕತೆಗಳೆಂದು ಕರೆಯಬಹುದಾದ 'ರೋಡೋಡೆಂಡರಾನ್' ಮತ್ತು '...ರಿ ಪ್ರಸನ್ನ'. ಕ್ಲೋನಿಂಗ್ (ವೈಜ್ಞಾನಿಕವಾಗಿ ಮನುಷ್ಯನ ತದ್ರೂಪು ಸೃಷ್ಟಿ) ಆಧಾರಿತ 'ಅಗಸ್ತ್ಯ', ಗಂಡ ಹೆಂಡತಿ ಇಬ್ಬರೂ ಕೆಲಸ ಮಾಡುವ ಕುಟುಂಬಗಳಲ್ಲಿ ಉಂಟಾಗಬಹುದಾದ ದಾಂಪತ್ಯದ ವಿರಸದ ಮೂಲ ಹೊಂದಿರುವ 'ಮನೆಕೆಲಸ'. ಏಕರೂಪತೆಯ ಪ್ರತೀಕವಾಗಿ ಬೆಳೆಯುತ್ತಿರುವ ಇಂದಿನ ಬೃಹತ್ ಶಹರುಗಳಲ್ಲಿ ನಮಗಿಂತ ಭಿನ್ನವಾಗಿ ಬದುಕುವ ವ್ಯಕ್ತಿಗಳನ್ನು ಅನುಮಾನದಿಂದ ನೋಡುವ ಪ್ರವೃತ್ತಿ ಬಗ್ಗೆ 'ಹಾವಾಡಿಗ'.

ನನ್ನ ಅನುಭವವಲಯವನ್ನು ಶ್ರೀಮಂತಗೊಳಿಸಿದ ಮತ್ತೊಂದು ಅವಕಾಶವೆಂದರೆ ನನಗೆ ಸಿಕ್ಕ ಆಂಡ್ರೂಸ್ ಫೆಲೊಶಿಪ್... ಇದರಡಿ ನಾನು ಕೆನಡಾದಲ್ಲಿನ ವ್ಯಾಂಕೋವರ್‌ನಲ್ಲಿ ಬ್ರಿಟಿಶ್ ಕೊಲಂಬಿಯ ವಿಶ್ವವಿದ್ಯಾಲಯದ ಕ್ರಿಯೇಟಿವ್ ರೈಟಿಂಗ್ ವಿಭಾಗದಲ್ಲಿ ಮೂರು ತಿಂಗಳು ಅಧ್ಯಯನ ಮಾಡಿದೆ. ಅಲ್ಲಿನ ಲೇಖಕ ಲೇಖಕಿಯರೊಡನೆ ಒಡನಾಟ, ನಾಲ್ಕು ತಿಂಗಳು ಒಬ್ಬಳೇ ಕೆನಡಾ ಮತ್ತು ಅಮೆರಿಕಾ ತಿರುಗಾಟ... ಅಪರಿಚಿತ ಸಂಸ್ಕೃತಿಗಳ ಪರಿಚಯ. ಅಗಾಧ ಓದು. ಆಗ ಭಿನ್ನ ಸಂಸ್ಕೃತಿಗಳ ಹಿನ್ನೆಲೆಯಿಂದ ಬಂದ ಕೆನಡಾ ಲೇಖಕಿಯರ ಕತೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದೆ. ಆಗ ಹುಟ್ಟಿದ್ದು ಆರು ನೀಳ್ಗತೆಗಳ ಸಂಕಲನ 'ಅವಳ ಸೂರ್ಯ'.

ನಾನು ಬೆಂಗಳೂರಿಗೆ ಬಂದ ಮೇಲೆ ಲಂಕೇಶ್ ಪತ್ರಿಕೆಯಲ್ಲಿ ಬರುತ್ತಿದ್ದ ನನ್ನ ಜನಪ್ರಿಯ ಕಾಲಂ 'ಮುಂಬೈ ಡೈರಿ' ನಿಲ್ಲಿಸಿದೆ. ಆದರೆ ಲಂಕೇಶರು ತಪ್ಪದೆ ಏನಾದರೂ ಬರೆಯಲೇ ಬೇಕೆಂದು ಒತ್ತಾಯ ಮಾಡಿದರು. ಆಗ ನನ್ನಿಂದ ಸಾಲು ಸಾಲಾಗಿ ಬಂದಿದ್ದು ಅತಿ ಸಣ್ಣಕತೆಗಳು. ಎಲ್ಲಿ ಕಾದು ಕೂತಿದ್ದುವೋ! ಅವು ನನಗೆ ತುಂಬಾ ಮುದ ಕೊಟ್ಟಿವೆ. ಕೆಲವೇ ಪದಗಳಲ್ಲಿ ಏನೆಲ್ಲಾ